(*d*) Minor repairs to the channel are found to be necessary and the matter is under examination.

ಶ್ರೀ ಫಕೀರಪ್ಪ ತಾವರೆ.—ನಾಗನೂರು ಕೆರೆಯ ರಿಪೇರಿ ಇನ್ನೂ ಯಾವ ಮಟ್ಟಿದಲ್ಲಿದೆ ?

†ಶ್ರೀ ಆಲೂರು ಹನುಮಂತಪ್ಪ.—ಈ ಕೆರೆ ರೆವೆನ್ಯೂ ಇಲಾಖೆಗೆ ಸೇರಿದ್ದು. ಪಿ. ಡಬ್ಲ್ಯು. ಡಿ. ಇಲಾಖೆಗೆ ತೆಗೆದುಕೊಂಡಿಲ್ಲ ಎನ್ನುವುದು ನಮ್ಮ ಗಮನದಲ್ಲಿದೆ.

ಶ್ರೀ ಫಕೀರಪ್ಪ ತಾವರೆ.—ಪಿ.ಡಬ್ಲ್ಯು.ಡಿ. ಇಲಾಖೆಗೆ ಈ ಕೆರೆಯನ್ನು ಇನ್ನೂ ಸೇರಿಸದೆ ಇರುವುದರಿಂದ ಈ ನಾಗನೂರು ಕೆರೆಯ ಹತ್ತಿರ ಇರುವ ಎಲೇ ತೋಟದ ರೈತರಿಗೆ ಪದೇ ಪದೇ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಬಂದಿದೆ.

ಶ್ರೀ ಫಕೀರಪ್ಪ ತಾವರೆ.—ಹಾಗಾದರೆ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ನಾನಾಗಲೇ ಹೇಳಿದಂತೆ ಈ ಕೆರೆಯನ್ನು ಪಿ.ಡಬ್ಲ್ಯು.ಡಿ. ಇಲಾಖೆಗೆ ವಹಿಸಿಕೊಂಡು ತಕ್ಕ ರಿಪೇರಿ ಕೆಲಸಗಳನ್ನು ಮಾಡ ಬೇಕಾಗಿದೆ.

ಶ್ರೀ ಫಕೀರಪ್ಪ ತಾವರೆ.—ನಾಗನೂರು ಕೆರೆಯ ಬಳಿ ಇರುವ ಎಲೇ ತೋಟಗಳಿಗೆ ಒಂದು ಎಕರೆಗೆ ನುಮಾರು ಏಳು ಸಾವಿರದಷ್ಟು ಖರ್ಚಾಗಿರುತ್ತದೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ ಎಂದು ತಿಳಿದು ಇದ್ದರೂ ಸರಕಾರ ಏಕೆ ಇನ್ನೂ ಲಕ್ಷ್ಯ ಕೊಡ ಲಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—ಕೆರೆಯನ್ನು ಪಿ. ಡಬ್ಲ್ಯು. ಡಿ. ಇಲಾಖೆಗೆ ತೆಗೆದುಕೊಂಡ ಮೇಲೆ ಇದನ್ನು ರಿಪೇರಿ ಮಾಡಬೇಕಾಗಿದೆ.

ಶ್ರೀ ಫಕೀರಪ್ಪ ತಾವರೆ.—ಇನ್ನೆಷ್ಟು ದಿವಸಗಳಲ್ಲಿ ಇದನ್ನು ಮಾಡಬೇಕೆಂದಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಆದಷ್ಟು ಜಾಗ್ರತೆ ಮಾಡಿಸಿ ಕೊಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಈ ಯೋಚನೆ ಮಾಡು ವಾಗ ಇದಕ್ಕೆ ಸಂಬಂಧಪಟ್ಟ ಸ್ಕೀಮನ್ನೇನಾದರೂ ಮಾಡಲಾಗಿದೆಯೇ ?

ಶ್ರೀ ಆಲೂರು ಹನುಮಂತಪ್ಪ.— ಈ ಕೆರೆ ರೆವೆನ್ಯೂ ಇಲಾಖೆಯ ವಶದಲ್ಲಿರುವುದರಿಂದ ಇದನ್ನು ಪಿ.ಡಬ್ಲ್ಯು.ಡಿ. ಇಲಾಖೆಗೆ ತೆಗೆದುಕೊಂಡು ಅನಂತರ ತಕ್ಕ ಕಾರ್ಯ ಕ್ರಮವನ್ನು ತೀವ್ರವಾಗಿ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಫಕೀರಪ್ಪ ತಾವರೆ.—ಯೋಚನೆ ಮಾಡು ತ್ತೇವೆಂದು ಹೇಳುತ್ತಲೇ ಇದ್ದೀರಿ. ನಾನು ಎರಡು ಮೂರು ಸಾರಿ ಸರಕಾರದ ಗಮನಕ್ಕೂ ತರುತ್ತಲೇ ಇದ್ದೇನೆ. ಆದಷ್ಟು ಜಾಗ್ರತೆ ಇದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಿರಾ ?

ಶ್ರೀ ಆಲೂರು ಹನುಮಂತಪ್ಪ.—ಆದಷ್ಟು ಜಾಗ್ರತೆ ಮಾಡಬೇಕೆಂದಿದ್ದೇವೆ.

ಶ್ರೀ ಫಕೀರಪ್ಪ ತಾವರೆ.—ಇಲ್ಲಿಯ ರೈತರಿಗೆ 16,140 ರೂಪಾಯಿಗಳಷ್ಟು ಸಾಲವೆಂದು ಕೊಟ್ಟಿದೆ ಎಂದು ಹೇಳಿದಿರಿ. ಆದರೆ ಈ ಜನರು ಪರಿಹಾರ ಕೇಳಿದ್ದರೇ ಏನಾ ಸಾಲವನ್ನಲ್ಲ. ಪರಿಹಾರವನ್ನೇಕೆ ಕೊಡಲಲ್ಲ ?

ಶ್ರೀ ಆಲೂರು ಹನುಮಂತಪ್ಪ.— ಇದರ ಬಗ್ಗೆ ಏವರ ಈಗ ನನ್ನಲ್ಲಿಲ್ಲ.

Sri N. O. SAMJAI.—(Marathi)

(*No answer*)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾಲ್ಕು ದಿನಗಳ ಕೆಳಗೆ ಮಾನ್ಯ ರೆವೆನ್ಯೂ ಮಂತ್ರಿಗಳು ನಮ್ಮ ಇಲಾಖೆಗೆ ಸೇರಿದ ಒಂದು ಕಚ್ಚೆಯೂ ಇಲ್ಲ ಎಂದರು. ಈಗ ನಮ್ಮ ಉಪಮಂತ್ರಿಗಳು ಒಂದು ಕೆರೆಯ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳುತ್ತಾರೆ ಇದರಲ್ಲಿ ಯಾವುದು ಸರಿ ?

ಶ್ರೀ ಆಲೂರು ಹನುಮಂತಪ್ಪ.—ಕೆ ರೆ ಗ ಳು ರೆವೆನ್ಯೂ ಇಲಾಖೆಗೆ ಸೇರಿದ್ದರೂ ಅವರು ಯಾವ ರಿಪೇರಿ ಕೆಲಸ ಮಾಡುವುದಿಲ್ಲ. ಪಿ. ಡಬ್ಲ್ಯು. ಡಿ. ಗೆ ವಹಿಸಿ ಕೆಲಸ ಮಾಡಬೇಕು. ಎರಡೂ ಕಡೆಗೂ ಸೇರಿರುತ್ತದೆ.

ಶ್ರೀ ಜಿ. ಪಿ. ಗೌಡ.—ಪ ರಿ ಹಾ ರ ವ ನ್ನು ರೆವೆನ್ಯೂ ಇಲಾಖೆಯಿಂದ ಕೊಡಲಾಯಿತೋ ಇಲ್ಲವೇ ಪಿ. ಡಬ್ಲ್ಯು. ಡಿ. ಇಲಾಖೆಯಿಂದ ಕೊಡಲಾಯಿತೋ ?

ಶ್ರೀ ಆಲೂರು ಹನುಮಂತಪ್ಪ.—ಪ ರಿ ಹಾರ ರೆವೆನ್ಯೂ ಇಲಾಖೆ ಕೊಡುತ್ತದೆ.

ಶ್ರೀ ಫಕೀರಪ್ಪ ತಾವರೆ.—ಈ ಕೆರೆಯ ರಿಪೇರಿ ಕೆಲಸ ವನ್ನು ಎಂದು ಮಾಡಬೇಕೆಂದು ಯೋಚಿಸಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಆದಷ್ಟು ಜಾಗ್ರತೆ ಮಾಡಿಸುತ್ತೇವೆ.

Repairs to the Old Gate situated on the state border on the Thirupathi Road in Mulbagal Taluk.

*Q.—447. Sri J. NARAYANAPPA (Mulbagal).—

Will the Government be pleased to state ;—

(*a*) whether they are aware that the old gate situated on the State border on the Tirupathi Road in Mulbagal Taluk, Kolar District, is in a dilapidated condition ;

(*b*) whether they will take steps to repair this gate ?

*A.—Sri VEERENDRA PATIL (Minister for Public Works).—

(*a*) Yes.

(*b*) Yes.

ಶ್ರೀ ಜೆ. ನಾರಾಯಣಪ್ಪ.—ನಮ್ಮ ಮುಳಬಾಗಿಲು ತಾಲ್ಲೂಕಿಗೆ ಸೇರಿದಂತೆ ಇಲ್ಲಿದ್ದ ಒಂದು ಸ್ಪೇಟ್ ಬೌಂಡ್ರಿಯ ನುಂದರವಾದ ಕಲ್ಲಿನ ಕಂಬ ಒಡೆದು ಬಿದ್ದಿದ್ದರೂ ಇದರ ಬಗ್ಗೆ ಇಷ್ಟು ದಿವಸಗಳಾದರೂ ರಿಪೇರಿ ಮಾಡದೇ ಇರಲು ಕಾರಣವೇನು ?

†ಶ್ರೀ ವೀರೇಂದ್ರ ಪಾಟೀಲ್.—1957–58 ರಲ್ಲಿ, ಇಲ್ಲಿದ್ದ ಒಂದು "ಪಿಲ್ಲರ್" ಬದ್ದು ಹೋಯಿತು. ಇದನ್ನು ಬದಲಾಯಿಸಿ ಬೇರೆ ಒಂದು ಪಿಲ್ಲರನ್ನು ತಯಾರು ಮಾಡಬೇಕೆಂದು ಅದರ ಪ್ಲಾನು ಮತ್ತು ಎಸ್ಟಿಮೇಟು ಗಳು ತಯಾರಾಗಿವೆ. ಇದು ನ್ಯಾಷನಲ್ ಹೈವೇ ಆದುದರಿಂದ ಕೇಂದ್ರ ಸ ರ್ಕಾ ರ ಕ್ಕೆ ಚೆಕ್ಕಿಕರ್ ಸಾಂಕ್ಷನ್ನು ಮತ್ತು ಫೈನಾನ್ಸಿಯಲ್ ಸ್ಯಾಂಕ್ಷನ್ನಿಗಾಗಿ ಈಗಾಗಲೇ ಕಳುಹಿಸಿ ಕೊಡಲಾಗಿದೆ.

ಶ್ರೀ ಜೆ. ನಾರಾಯಣಪ್ಪ.—ಇದು ತಿರುಪತಿಗೆ ಹೋಗಿ ಬರುವ ಮದರಾಸು ರಸ್ತೆಯಲ್ಲಿರುವ ಈ ಗ್ರೇಡಿನಲ್ಲಿದ್ದ ಒಂದು ಕಂಬ ಬಿದ್ದಿರುವುದನ್ನು ಜನ ನೋಡಿಕೊಂಡು ಹೋಗುತ್ತಿದ್ದಾರೆ. ನಾನು ಹತ್ತು ವರ್ಷಗಳಿಂದಲೂ ಇದನ್ನು ದುರಸ್ತು ಮಾಡಲು ಕೇಳುತ್ತಲೇ ಇದ್ದೇನೆ. ಇನ್ನೆಷ್ಟು ದಿವಸಗಳ ಕಾಲದಲ್ಲಿ ಈ ಕೆಲಸವನ್ನು ಮಾಡಿಸುತ್ತಾರೆ ?

ಶ್ರೀ ವೀರೇಂದ್ರ ಪಾಟೀಲ್.—ಇದು 1957-58ನೇ ಸಾಲಿಗೆ ಸೇರಿದ್ದು. ಆಲ್ಲಿದ್ದ ಒಂದು ಪಿಲ್ಲರು ಬಿದ್ದುದನ್ನು ತೆಗೆದು ಬೇರೆ ಒಂದನ್ನು ಶ್ರೀಮಾನ್ ನಾರಾಯಣಪ್ಪನವರು ಹೇಳಿದ ಹಾಗೆ ಆರ್ಟಿಸ್ಟಿಕ್ ಡಿಸೈನ್‌ನಂತೆ ಪ್ಲಾನು ಮತ್ತು ಎಸ್ಟಿಮೇಟುಗಳನ್ನು ತಯಾರು ಮಾಡಬೇಕೆಂದು ಸುಮಾರು 36,000 ರೂಪಾಯಿಗಳ ಅಂದಾಜನ್ನು ತಯಾರಿಸಿ, ಪ್ಲಾನಿನೊಡನೆ ಕೇಂದ್ರ ಸರಕಾರಕ್ಕೆ ಮಂಜೂರಾತಿಗಾಗಿ ಕಳುಹಿಸಲಾಗಿದೆ. ಅದು ಬಂದ ತಕ್ಷಣ ಇದರ ಕೆಲಸ ಪ್ರಾರಂಭ ಮಾಡುತ್ತೇವೆ. ಇದೇ ರೀತಿಯಲ್ಲಿ ನಮ್ಮ ಸ್ಟೇಟಿನಲ್ಲಿರುವ ಎಲ್ಲಾ ಜಿಲ್ಲೆಗಳಲ್ಲಿಯೂ ಆರ್ಟಿಸ್ಟಿಕ್ಕಾಗಿ ಮಾಡಬೇಕೆನ್ನುವ ವಿಚಾರವೂ ಸರಕಾರಕ್ಕಿದೆ.

Sri S. RAJAGOPAL.—When did you send this plan for the approval of the Central Government ?

Sri VEERENDRA PATIL.—We have sent this plan to the Govt. of India on 18th May 1962.

ಶ್ರೀ ಜಿ. ಎ. ಗೌಡ.—ನಾಲ್ಕಾರು ಕಡೆ ಗಡಿ ನಿರ್ಮಿಸುವುದಾದರೆ ಮುಂದೆ ಮೈಸೂರಿಗೆ ಸೇರುವ ಪ್ರದೇಶ ಇದ್ದರೆ ಅದರಿಂದ ಅಡಚಣೆಯಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ ಪ್ರತಿಯೊಂದು ಬಾರ್ಡರ್‌ನಲ್ಲೂ ಆರ್ಚಸ್ ಹಾಕಬೇಕೆನ್ನುವುದನ್ನು 4 ವರ್ಷದಲ್ಲಿ ಎಲ್ಲಾ ಕಡೆಯೂ ಮಾಡೋಣ ಎಂದು ಇದೆ. ಆಂತಹಕಡೆ ಬರುವುದು ಯಾವುದಾದರು ಇದ್ದರೆ ಆಂತಹದನ್ನು ನಿಧಾನವಾಗಿ ಮಾಡೋಣ.

ಶ್ರೀ ಶರಣಪ್ಪ.—ಇದಕ್ಕೆ ಸ್ಟೇಟ್ ಗವರ್ನ್‌ಮೆಂಟ್ ಹಣ ಕೊಡುತ್ತದೆಯೋ ಸೆಂಟ್ರಲ್ ಗವರ್ನ್‌ಮೆಂಟ್ ಹಣ ಕೊಡುತ್ತದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ನ್ಯಾಷನಲ್ ಹೈವೇದಲ್ಲಿ ಆರ್ಚಸ್ ಹಾಕುವುದರಿಂದ ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಹಣ ಕೊಡುತ್ತಾರೆ ಎಂಬ ಭರವಸೆ ಇದೆ. ಈಗಾಗಲೇ ಬರೆದಿದ್ದೇವೆ. ಅವರು ಕೊಡುವುದಿಲ್ಲ ಎಂದರೆ ನಮ್ಮ ಸ್ಟೇಟ್ ರಿಸೋರ್ಸ್‌ನಿಂದ ಕಟ್ಟುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಸಂಜೀವನಾಥ ಐಕಳ.—ಕಟ್ಟಿ ಆಮೇಲೆ ಹಣ ಕೇಳಬಹುದಲ್ಲವೇ ?

(*No answer*)

ಶ್ರೀ ಜಿ. ಎ. ಗೌಡ.—ಯಾವ ಯಾವ ಸ್ಥಳದಲ್ಲಿ ಈ ಗಡಿಗಳು ಬರುತ್ತವೆ ?

ಶ್ರೀ ವೀರೇಂದ್ರ ಪಾಟೀಲ್.—ತಮಗೆಲ್ಲ ಗೊತ್ತಿದೆ.

ಶ್ರೀ ಜಿ. ಎ. ಗೌಡ.—ಯಾವ ಸ್ಥಳದಲ್ಲ ಎಂಬುದು ಗೊತ್ತಿಲ್ಲ, ನಾಗರತ್ನಮ್ಮನವರು ನಮ್ಮ ಕಡೆ ಬರಬೇಕೆಂದು ಹೇಳುತ್ತಾರೆ, ನಾನು ನಮ್ಮ ಕಡೆ ಬರಬೇಕೆಂದು ಹೇಳುತ್ತೇನೆ, ಸರಿಯಾದ್ದು ಯಾವ ಸ್ಥಳ ಎಂದು ಸರ್ಕಾರದವರು ನಿಶ್ಚಯಿಸಿದ್ದೀರಿ ?

Mr. SPEAKER.—How does it arise out of this question ?

Sri G. V. GOWDA.—It arises from the answer given by the Minister.

Mr. SPEAKER.—It goes beyond the scope of the main question.

Sanctioned strength of Medical Officers in each of the Hospitals, Dispensaries and Primary Health Centres of South Kanara District.

*Q.—502. Sri GOPALA SALENNA (Mudabidri).—

Will the Government be pleased to state :—

(*a*) the total sanctioned strength of the posts of Medical Officers in each of the Hospitals, Dispensaries and Primary Health Centres in South Kanara District ;

(*b*) the number of Hospitals, Dispensaries and Primary Health Centres of the above District in respect of which no Medical Officers have beeh posted during the last three months and for their interim vacancies for more than three months in the years 1961-62 and 1962-63 ;

(*c*) whether it is a fact that the employees of the following have not received their salaries for the last three months for want of renewal of the sanctioned order by the concerned authority :—

(i) Mobile Medical Unit, Puttur in South Kanara District ;

(ii) Primary Health Centre, Hebri in South Kanara District ;

(iii) Primary Health Centre, Shirthandy in South Kanara District ?

A.—Sri K. NAGAPPA ALVA (Minister for Health).—

(*a*) *Vide* statement 'A'given below.

(*b*) *Vide* statement 'B'given below.

(*c*) They have since received their pay.